| | | |
|---|---|---|
| OS | 20/2022 | ಪಿ.ಡಬ್ಲ್ಯೂ 1 |

ಇಂದು ದಿಃ 12.02.2025 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ1 ನೇ ಪ್ರತಿವಾದಿ ಪರ ಶ್ರೀ JP ವಕೀಲರಿಂದಃ

ವಾದಿಗಳಿಗೆ ಮತ್ತು 1 ನೇ ಪ್ರತಿವಾದಿಗೆ ದಾವಾ ಆಸ್ತಿ ಪಿತ್ರಾರ್ಜಿತ ಆಸ್ತಿ ಎಂದು ತೋರಿಸುವ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಮಾಡಿದ್ದೇನೆ. ನಾನು ಹಾಜರು ಮಾಡಿದ ದಾಖಲೆಗಳು 1 ನೇ ಪ್ರತಿವಾದಿ ಹೆಸರಿನಲ್ಲಿರುವ ದಾಖಲೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ಹೆಸರಿನಲ್ಲಿ ಸರ್ವೆ ನಂಬರ್ 95/1 ಇದ್ದು ಅದು 3 ಎಕರೆ ಜಮೀನು ಇತ್ತು.ಸದರಿ ಆಸ್ತಿ ನನ್ನ ತಂದೆಗೆ ಪಿತ್ರಾರ್ಜಿತವಾಗಿ ಬಂದ ಆಸ್ತಿ ಎಂದರೆ ಸರಿ. ನನ್ನ ತಂದೆ ಬದುಕಿರುವಾಗಲೇ 04.11.2006 ರಲ್ಲಿ ನಮಗೆಲ್ಲಾ ವಿಭಾಗ ಮಾಡಿಕೊಟ್ಟಿದ್ದರು ಎಂದರೆ ಸರಿ. 3 ಎಕರೆ ಆಸ್ತಿಯನ್ನು ಎ ಮತ್ತು ಬಿ ಎಂದು ವಿಭಾಗ ಮಾಡಿ ವಾದಿಗೆ ಎ ಭಾಗ ಮತ್ತು 1 ನೇ ಪ್ರತಿವಾದಿಗೆ ಬಿ ಭಾಗವನ್ನು ಕೊಟ್ಟಿದ್ದರು ಎಂದರೆ ಸರಿ. ನನ್ನ ತಂದೆ ವಿಭಾಗ ಪತ್ರ ಮಾಡಿದಾಗ ನನಗೆ ಭಾಗ ಬಂದಿತ್ತು ಆ ವಿಭಾಗದ ಬಗ್ಗೆ ನಮ್ಮ ತಕರಾರು ಇರಲಿಲ್ಲ. ವಿಭಾಗವಾಗಿ ಬಂದ ಆಸ್ತಿಗಳು ಮಾರಾಟವಾದ ಕಾರಣ ಈ ದಾವೆಯಲ್ಲಿ ತೋರಿಸಿಲ್ಲ. ವಿಭಾಗವಾಗದ ಆಸ್ತಿಗಳನ್ನು ನಮ್ಮ ನಮ್ಮ ಸ್ವಾಧೀನಕ್ಕೆ ಕೊಟ್ಟಿದ್ದರು ಎಂದರೆ ಸರಿ.

2016 ರಲ್ಲಿ ನನಗೆ ಅಪಘಾತವಾಗಿತ್ತು ಎನ್ನುವ ಬಗ್ಗೆ ದಾಖಲೆಯನ್ನು ನಾನು ಈವರೆಗೂ ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ. ಪ್ರಕರಣದಲ್ಲಿ ವಿಳಂಬವಿರುವ ಕಾರಣ ನನಗೆ ಅಪಘಾತವಾಗಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ 40 ವರ್ಷ ಗಳಿಂದ ಸಾಗುವಳಿ ಮಾಡುತ್ತಿದ್ದರು ಎನ್ನುವ ಬಗ್ಗೆ ದಾಖಲೆ ಹಾಜರು ಮಾಡಿಲ್ಲ, ಮುಂದಕ್ಕೆ ಹಾಜರು ಮಾಡುತ್ತೇನೆ ಎಂದು ಸಾಕ್ಷಿ ನುಡಿಯುತ್ತಾರೆ. ಸರ್ವೆ ನಂಬರ್ 81 ರ ದಾಖಲೆಯನ್ನು ಯಾಕೆ ಹಾಜರು ಮಾಡಿಲ್ಲ ಎಂದರೆ ಮುಂದಕ್ಕೆ ಹಾಜರು ಮಾಡುತ್ತೇನೆ ಎಂದು ಸಾಕ್ಷಿ ನುಡಿಯುತ್ತಾರೆ. ನನ್ನ ಹೆಸರಿನಲ್ಲಿ ಯಾವ ದಾಖಲೆಗಳು ಇಲ್ಲದ ಕಾರಣ ಹಾಜರು ಮಾಡಿಲ್ಲ ಮುಂದಕ್ಕೆ ಹಾಜರು ಮಾಡುತ್ತೇನೆ ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ತಂದೆ 95/1 ರ 25 ಗುಂಟೆ ಆಸ್ತಿಯನ್ನು ಅಕ್ರಮ ಸಕ್ರಮ ಆಧಾರದಲ್ಲಿ 2 ನೇ ಪ್ರತಿವಾದಿಗೆ ಅರ್ಜಿ ಕೊಟ್ಟಿದ್ದರು ಎಂದರೆ ಸರಿ. ನಂತರ ಅದು 2 ನೇ ಪ್ರತಿವಾದಿಯ ಅಡಿ ಎಲ್ ಎನ್ ಡಿ ಸಿ ಆರ್ 592/98-99 ರಂತೆ ದಾಖಲಾಗಿತ್ತು ಎಂದರೆ ಸರಿ. ನನ್ನ ತಂದೆ 11.08.2009 ರಂದು ಮೃತಪಟ್ಟರು. ನಂತರ 2 ನೇ ಪ್ರತಿವಾದಿ ಸದರಿ ಅರ್ಜಿಯನ್ನು ವಜಾ ಮಾಡಿದರು ಎಂದರೆ ಸರಿಯಲ್ಲ. ನನ್ನ ತಂದೆ ಕೊಟ್ಟ ಅರ್ಜಿ ಇನ್ನೂ ಚಾಲ್ತಿಯಲ್ಲಿದೆ. ಸದರಿ ಅರ್ಜಿ ಚಾಲ್ತಿಯಲ್ಲಿದೆ ಎಂದು ಅದನ್ನು ಹಾಜರು ಮಾಡಿಲ್ಲ, ಹಾಜರು ಮಾಡುತ್ತೇನೆ ಎಂದು ಸಾಕ್ಷಿ ನುಡಿಯುತ್ತಾರೆ.

ದಾವಾ ಆಸ್ತಿಗಳು 1 ನೇ ಪ್ರತಿವಾದಿಗಳ ಹೆಸರಿನಲ್ಲಿ ಇವೆ ಮತ್ತು ನನ್ನ ತಂದೆಗೆ ದಾವಾ ಆಸ್ತಿ ಪಿತ್ರಾರ್ಜಿತ ಆಸ್ತಿ ಎನ್ನುವ ಬಗ್ಗೆ ಯಾವುದೇ ದಾಖಲಾತಿಗನ್ನು ಹಾಜರು ಮಾಡಿಲ್ಲ ಎಂದರೆ ಸರಿ.

ಮುಂದುವರಿದ ಪಾಟೀ ಸವಾಲಿಗೆ ಸಮಯ ಕೇಳಿದ್ದು ಸಮಯ ನೀಡಲಾಯಿತು.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

SD/-

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆ ಎಂ ಎಫ್ ಸಿ., ನಂಜನಗೂಡು.